ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 6, January-February 2024, Pp. 11-17
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಶಿರವಾಳ ಗ್ರಾಮದ ದೇಗುಲಗಳು

**ದಾನಪ್ಪನವರ ಬಸವರಾಜ**
ಸಂಶೋಧನಾ ವಿದ್ಯಾರ್ಥಿ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

***Abstract:***
*ಶಿರವಾಳ ಗ್ರಾಮವು ತಾಲೂಕು ಕೇಂದ್ರವಾದ ಶಹಾಪುರದಿಂದ ಈಶಾನ್ಯಕ್ಕೆ 15 ಕಿ.ಮೀ. ದೂರದಲ್ಲಿ ಭೀಮಾನದಿಯ ಬಲ ದಂಡೆಯ ಮೇಲೆ ಸುಮಾರು ಎರಡು ಕಿ.ಮೀ ಒಳಕ್ಕಾದಂತೆ ಇರುವ ಚಾರಿತ್ರಿಕ ಮಹತ್ವದ ಸ್ಥಳವಾಗಿದ್ದು, ಶೈವ ಪುರಾಣೋಕ್ತ ಸಿರಿಯಾಳ ಶೆಟ್ಟಿಯ ಹುಟ್ಟೂರು ಇದೆಂಬ ಐತಿಹ್ಯವಿದೆ. ಪ್ರಾಚೀನ ಶಾಸನಗಳಲ್ಲಿ ಶ್ರೀವೊಳಲು ಸಿರಿವೊಳಲು, ದಕ್ಷಿಣ ವಾರಣಾಸಿ, ಧರ್ಮದ ಮನೆ, ಆದಿ ಪಟ್ಟಣ ಎಂದೆಲ್ಲಾ ಹೊಗಳಿಸಿಕೊಂಡಿದೆ. ಇದು ಹಿಂದೆ ಸಗರನಾಡಿಗೆ ಸೇರಿತ್ತು. ಈ ಊರು ಶಾತವಾಹನರಷ್ಟು ಪ್ರಾಚೀನವಾದ ನೆಲೆಯಾಗಿದ್ದು, ಇಲ್ಲಿಂದ ಈವರೆಗೆ ಐದು ಶಾಸನಗಳು ವರದಿಯಾಗಿದೆ. ಪ್ರಸ್ತುತ ಲೇಖನದಲ್ಲಿ ಶಿರವಾಳ ಗ್ರಾಮದ ದೇಗುಲಗಳ ಕುರಿತು ಅಧ್ಯಯನ ಮಾಡಲಾಗಿದೆ.*

***Keywords:*** *ಶಿರವಾಳ, ದೇಗುಲಗಳು, ಕಲೆ ಮತ್ತು ವಾಸ್ತುಶಿಲ್ಪ, ಅಧಿಷ್ಠಾನ, ಗರ್ಭಗೃಹ, ಅಂತರಾಳ ಮತ್ತು ನವರಂಗ.*

## ಪೀಠಿಕೆ

ಶಿರವಾಳ ಹಾಗೂ ನೆರೆಹೊರೆ ಗ್ರಾಮದಲ್ಲಿರುವ ಶಾಸನಗಳಿಂದ ಶಿರವಾಳದಲ್ಲಿ ಹಿಂದೆ ಕದಂಬೇಶ್ವರ, ಎರೆಹೇಶ್ವರ, ಚಟ್ಟೇಶ್ವರ, ಸಿದ್ಧಸಾತೇಶ್ವರ, ಅಲ್ಲೇಶ್ವರ, ಮಹಾದೇವ, ಸೋಮೇಶ್ವರ, ಶಾಂತೀಶ್ವರ, (ಸಿದ್ಧ ಸಾತೇಶ್ವರ) ಮುಂತಾದ ದೇವಾಲಯಗಳಿದ್ದ ಅಂಶ ಗೊತ್ತಾಗುತ್ತದೆ. ಆದರೂ ಇಂದು ಅವುಗಳನ್ನು ಖಚಿತವಾಗಿ ಗುರುತಿಸಲಾಗುತ್ತಿಲ್ಲ. ಈ ಗ್ರಾಮದಲ್ಲಿಂದು ಸುಮಾರು 20 ಪ್ರಾಚೀನ ದೇಗುಲಗಳಿವೆ ಇವುಗಳಲ್ಲಿ ಅಣಬಿ ಗ್ರಾಮಕ್ಕೆ ಹೋಗುವ ರಸ್ತೆಯ ಇಕ್ಕೆಲದಲ್ಲಿ ಏಳು, ಹಳ್ಳದಾಚೆಗೆ ಮೂರು ಹಾಗೂ ಊರಲ್ಲಿ ಹತ್ತು ದೇಗುಲಗಳಿವೆ. ಆದರೆ ಪ್ರಸ್ತುತ ಕೆಲವು ದೇಗುಲಗಳು ಮಾತ್ರ ಉಳಿದಿದ್ದು, ಇನ್ನು ಕೆಲವು ನಾಶವಾಗಿ ಕಣ್ಮರೆಯಾಗಿವೆ. ಈ ದೇವಾಲಯಗಳು ರಾಷ್ಟ್ರಕೂಟ–ಕಲ್ಯಾಣದ ಚಾಳುಕ್ಯ ಸಂಕ್ರಮಣ ಕಾಲಾವಧಿ ಹಾಗೂ ಕಳಚೂರಿಗಳ ಕಾಲದ ರಚನೆಗಳಾಗಿದ್ದು, ಇವುಗಳಲ್ಲಿ ಕೆಲವು ಉತ್ಕೃಷ್ಟ ಕಲಾಕೃತಿಗಳಾಗಿವೆ.

## ದೇಗುಲ

ಶಿರವಾಳ ಗ್ರಾಮದ ಪಶ್ಚಿಮ ದಿಕ್ಕಿಗೆ ಸುಜ್ಞಾನೇಶ್ವರ ದೇವಾಲಯಕ್ಕೆ ಹೋಗುವ ದಾರಿಯಲ್ಲಿ ಬಲಭಾಗಕ್ಕೆ ಹಳ್ಳದ ದಂಡೆಯ ಮೇಲೆ ಇದೆ. ಈ ದೇಗುಲವು ಗುರುಪಾಟೀಲ ಹೊಲದಲ್ಲಿ ಕಂಡುಬರುತ್ತದೆ. ಇದು ಸುಮಾರು 10–11ನೆಯ ಶತಮಾನಕ್ಕೆ ಸೇರಿದ್ದು ಈ ದೇಗುಲವು ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿ

***Please cite this article as:*** ದಾನಪ್ಪನವರ ಬಸವರಾಜ. (2024). ಶಿರವಾಳ ಗ್ರಾಮದ ದೇಗುಲಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(6), 11–17.

ನಿರ್ಮಿಸಲಾಗಿದೆ. ಈ ದೇಗುಲ ಪ್ರಸ್ತುತ ವಿನಾಶದ ಹಂತದಲ್ಲಿದೆ. ಇನ್ನು ಇದರ ರಚನಾ ವಿನ್ಯಾಸದ ಲಕ್ಷಣಗಳೆಂದರೆ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ.

ಗರ್ಭಗೃಹವನ್ನು ಗಮನಿಸಿದಾಗ ಅದರಲ್ಲಿ ಯಾವುದೇ ಮೂರ್ತಿಶಿಲ್ಪವು ಕಂಡುಬರುವುದಿಲ್ಲ. ಗರ್ಭಗೃಹದ ಬಾಗಿಲವಾಡವು ಮೂರು ಪಟ್ಟಿಕೆಗಳಾಗಿ ಕೂಡಿದ್ದು, ಈ ಬಾಗಿಲವಾಡವು ಲತಾ ಪಟ್ಟಿಕೆ, ಸ್ತಂಭ ಪಟ್ಟಿಕೆ ಮತ್ತು ಅರ್ಧವೃತ್ತ ಪಟ್ಟಿಕೆಗಳಿಂದ ನಿರ್ಮಿಸಲಾಗಿದೆ. ಲತಾ ಪಟ್ಟಿಕೆಯಲ್ಲಿ ಹೂಬಳ್ಳಿ ಚಿತ್ರಗಳು, ಸ್ತಂಭ ಪಟ್ಟಿಕೆಯಲ್ಲಿ ಕೀರ್ತಿಮುಖ ರಚನೆ ಹಾಗೂ ಅರ್ಧವೃತ್ತ ಪಟ್ಟಿಕೆಯಲ್ಲಿ ಪದ್ಮ ದಳಗಳ ರಚನೆಯು ಕಂಡುಬರುತ್ತವೆ. ಈ ದೇಗುಲದ ಅಂತರಾಳ, ನವರಂಗದ ಭಾಗಗಳು ನಾಶಗೊಂಡಿವೆ ಆದರೆ ಈ ದೇಗುಲದ ಮುಂದಿನ ಭಾಗದಲ್ಲಿ ಬಿದ್ದಿರುವ ಅವಶೇಷಗಳನ್ನು ಗಮನಿಸಿದಾಗ ಈ ದೇಗುಲದ ಮುಂದಿನ ಭಾಗವು ಅಂತರಾಳ ಹಾಗೂ ನವರಂಗವನ್ನು ಹೊಂದಿರುವಂತೆ ತೋರುತ್ತದೆ.

ಏರುವಿನ್ಯಾಸ ಗಮಸಿದಾಗ ಅಧಿಷ್ಠಾನ, ಭಿತ್ತಿ ಮತ್ತು ಪ್ರಸ್ತರ ಭಾಗಗಳಿಂದ ಕೂಡಿದ್ದು, ಅಧಿಷ್ಠಾನ ಭಾಗವು ಮಣ್ಣಿನಲ್ಲಿ ಮುಚ್ಚಿದ್ದು ಕೇವಲ ತ್ರಿಪಟ್ಟ ಕುಮುದು ಮಾತ್ರ ಕಂಡುಬರುತ್ತದೆ. ಗರ್ಭಗೃಹದ ಹೊರಭಿತ್ತಿ ಮತ್ತು ಪ್ರಸ್ತರ ಭಾಗಗಳು ಮಾತ್ರ ಉಳಿದಿವೆ. ಭಿತ್ತಿಯ ಭಾಗವು ಮುಂಚ್ಚಾಚು ಮತ್ತು ಹಿಂಚ್ಚಾಚಿದಂತೆ ನಿರ್ಮಿಸಿ ಇದರಲ್ಲಿ ಕರ್ಣ, ಸಲಿಲಾಂತರ, ಭದ್ರ, ಸಲಿಲಾಂತರ, ಕರ್ಣ ಭಾಗಗಳನ್ನು ಹೊಂದಿದೆ. ಹಾಗೆಯೇ ಭಿತ್ತಿ ಭಾಗದಲ್ಲಿ ಅರ್ಧಗಂಬಗಳ ರಚನೆಯನ್ನು ಮಾಡಲಾಗಿದೆ. ಪ್ರಸ್ತರ ಭಾಗದಲ್ಲಿ ಕಪೋತ, ಅಲಿಂಗ, ಅಂತರಿತ, ಪ್ರತಿ ಮತ್ತು ಕಪೋತವನ್ನು ಹೊಂದಿದು. ಕೆಳಭಾಗದ ಕಪೋತದಲ್ಲಿ ನಾಸಿಗಳ ರಚಿಸಿ ಅದರ ಮೇಲೆ ಕೀರ್ತಿಮುಖಗಳ ರಚನೆಯನ್ನು ಮಾಡಲಾಗಿದೆ. ಇನ್ನೂ ಅಲಿಂಗ, ಅಂತರಿತದ ಮೇಲೆ ಕೆಲವು ಶಿಲ್ಪಗಳು ಇರುವಂತೆ ಕಂಡರು ಸಹ ಪ್ರಸ್ತುತ ಅವುಗಳನ್ನು ಗುರುತಿಸಲು ಸಾಧ್ಯವಾಗುತ್ತಿಲ್ಲ. ಹಾಗೆಯೇ ಇವುಗಳ ಮೇಲೆ ಇನ್ನೊಂದು ಕಪೋತವನ್ನು ನಿರ್ಮಿಸಿದ್ದು, ಈ ಕಪೋತದಲ್ಲಿ ನಾಸಿಕೋಷ್ಠಗಳನ್ನು ರಚಿಸಲಾಗಿದೆ. ಇದನ್ನು ಕಪೋತನಾಸಿ ಎಂದು ಸಹ ಕರೆಯುತ್ತಾರೆ.

**ದೇಗುಲಗಳ ಸಮೂಹ**

ಶಿರವಾಳ ಗ್ರಾಮದಿಂದ ಅಣಬಿಗೆ ಹೋಗುವ ಮಾರ್ಗದ ರಸ್ತೆಯ ಎಡಭಾಗಕ್ಕೆ ಹಳ್ಳದ ದಿನ್ನೆಯ ಮೇಲೆ ಸುಮಾರು ಏಳು ದೇಗುಲಗಳ ಸಮೂಹಗಳು ಕಂಡುಬರುತ್ತವೆ. ಇಲ್ಲಿರುವ ಎಲ್ಲಾ ದೇಗುಲಗಳು ಪೂರ್ವಾಭಿಮುಖವಾಗಿದ್ದು, ಈ ದೇಗುಲಗಳು 10–11ನೆಯ ಶತಮಾನದಲ್ಲಿ ನಿರ್ಮಾಣವಾಗಿವೆ. ಆದರೆ ಕೆಲವು ಇತಿಹಾಸಕಾರರು ಈ ದೇಗುಲಗಳು 11ನೆಯ ಶತಮಾನದ ನಂತರ ನಿರ್ಮಿಸಲಾಗಿವೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇಲ್ಲಿಯ ಎಲ್ಲಾ ದೇಗುಲಗಳು ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿ ನಿರ್ಮಾಣವಾಗಿದ್ದು, ಕೆಲವು ದೇಗುಲಗಳು ನಾಶ ಹೊಂದಿ ಕೆಲವು ಮಾತ್ರ ಕನಿಷ್ಠ ಸ್ಥಿತಿಯಲ್ಲಿ ಉಳಿದುಕೊಂಡಿವೆ. ಈ ದಿನ್ನೆಯ ಮೇಲೆ ಇರುವ ದೇಗುಲಗಳ ಸಮೂಹವು ಎಲ್ಲಾ ಪೂರ್ವಾಭಿಮುಖವಾಗಿದ್ದು ದೇಗುಲಗಳ ಮುಖ ದಿಕ್ಕಿನಿಂದ ಎಡದಿಂದ ಬಲಕ್ಕೆ ದೇಗುಲಗಳ ವಿವರವನ್ನು ನೀಡಲಾಗಿದೆ.

**ದೇಗುಲ–1**

ಈ ದೇಗುಲವು ಗರ್ಭಗೃಹ, ಅಂತರಾಳ ಮತ್ತು ನವರಂಗ/ಸಭಾಮಂಟಪ ಕಂಡುಬರುತ್ತವೆ. ಪ್ರಸ್ತುತ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಕೊಂಡ ಲಕ್ಷಣಗಳೆಂದರೆ ಗರ್ಭಗೃಹ ಮಾತ್ರ ಉಳಿದುಕೊಂಡಿದ್ದು ಇನ್ನುಳಿದ ಭಾಗಗಳು ನಾಶಗೊಂಡಿವೆ. ಗರ್ಭಗೃಹವು ಚೌಕಕಾರವಾಗಿದ್ದು, ಇದರಲ್ಲಿ ಯಾವುದೇ ಮೂರ್ತಿಶಿಲ್ಪಗಳಿರುವುದಿಲ್ಲ. ಆದರೆ ಈ ದೇಗುಲದ ಪಕ್ಕದಲ್ಲಿ ಬಿದ್ದಿರುವ ಪೀಠದ ಅವಶೇಷ ಮತ್ತು ಗರ್ಭಗೃಹದ ಎಡಭಾಗಕ್ಕೆ ಪ್ರನಾಳ ಇರುವುದರಿಂದ ಮೂರ್ತಿಶಿಲ್ಪ ಇರುವಂತೆ

ಕಂಡುಬಂದರೂ ಅದು ಪ್ರಸ್ತುತ ದಿನಗಳಲ್ಲಿ ಕಾಣೆಯಾಗಿದೆ. ಇನ್ನೂ ಅಂತರಾಳ ಮತ್ತು ನವರಂಗ ಭಾಗಗಳು ನಾಶ ಹೊಂದಿದ್ದು, ಅವುಗಳ ಅವಶೇಷಗಳು ಆವರಣದಲ್ಲಿರುವುದನ್ನು ಗಮನಿಸ ಬಹುದು. ಈ ಅವಶೇಷಗಳ ಮೂಲಕ ಈ ದೇಗುಲವು ನವರಂಗವನ್ನು ಹೊಂದಿದೆ ಎಂದು ಊಹಿಸಬಹುದಾಗಿದೆ. ನವರಂಗದ ಭಾಗಗಳಲ್ಲಿ ಕೇವಲ ಅಧಿಷ್ಠಾನ ಭಾಗ ಮಾತ್ರ ಉಳಿದುಕೊಂಡಿದ್ದು, ಭಿತ್ತಿ ಹಾಗೂ ಪ್ರಸ್ತರ ಭಾಗ ನಾಶಗೊಂಡಿವೆ.

ಈ ದೇಗುಲದ ಗರ್ಭಗೃಹ ಅಧಿಷ್ಠಾನ, ಭಿತ್ತಿ ಹಾಗೂ ಪ್ರಸ್ತರವನ್ನು ಹೊಂದಿದು, ಅಧಿಷ್ಠಾನ ಭಾಗದಲ್ಲಿ ಉಪಾನ, ಜಗತಿ, ಕಂಪ, ಗಳ, ಕಂಪ, ತ್ರಿಪಟ ಕುಮುದ, ಕಂಪ, ಗಳ, ಕಂಪ ಹಾಗೂ ಕಪೋತವನ್ನು ಹೊಂದಿದೆ. ಈ ಅಧಿಷ್ಠಾನ ಭಾಗದಲ್ಲಿ ಉಪಾನ ಮತ್ತು ಜಗತಿ ಭಾಗಗಳು ಎತ್ತರವಾಗಿದ್ದು, ಪ್ರದೇಶದ ತಗ್ಗು ಅಥವಾ ಎತ್ತರಕ್ಕೆ ಅನುಗುಣವಾಗಿ ಅವುಗಳ ಗಾತ್ರವನ್ನು ಹೆಚ್ಚಿಸಿದಂತೆ ಕಂಡುಬರುತ್ತವೆ. ಈ ಅಧಿಷ್ಠಾನವನ್ನು 'ಕಪೋತಬಂಧ ಅದಿಷ್ಠಾನ' ಎಂದು ಕರೆಯಬಹುದು. ಕಪೋತಬಂಧ ಅಧಿಷ್ಠಾನವನ್ನು 'ಮಯಮತ' ಗ್ರಂಥವು ಹೆಸರಿಸಿದ್ದು, ಇದು ಒಂದು ರೀತಿಯ ಪಾದಬಂಧ ಅಧಿಷ್ಠಾನದ ಪ್ರಭೇದವೆನ್ನಬಹುದು. ಇದರ ಅಂಗಗಳೆಂದರೆ ಉಪಾನ, ಜಗತಿ, ತ್ರಿಪಟ್ಟ ಕುಮುದ, ಗಳ, ಕಪೋತ, ಮತ್ತು ಪ್ರತಿಗಳೆಂದು ಗುರುತಿಸಬಹುದು.

ಭಿತ್ತಿ ಭಾಗದಲ್ಲಿ ಯಾವುದೇ ಅಲಂಕಾರಣೆಗಳಿರುವುದಿಲ್ಲ, ಆದರೆ ಈ ಭಾಗದಲ್ಲಿ ಅರ್ಧಸ್ತಂಭಗಳ ರಚನೆಯನ್ನು ಮಾಡಲಾಗಿದೆ. ಹಾಗೂ ಈ ದೇಗುಲದ ಭಿತ್ತಿ ಭಾಗವನ್ನು ಗಮನಿಸಿದಾಗ ಭಿತ್ತಿಯ ಮಧ್ಯಭಾಗವು ಹೊರ ಬಂದಂತೆ ನಿರ್ಮಿಸಲಾಗಿದ್ದು, ಇದು ಕರ್ಣ, ಸಲಿಲಾಂತರ, ಭದ್ರ, ಸಲಿಲಾಂತರ ಕರ್ಣ ಭಾಗಗಳು ಕಂಡುಬರುತ್ತವೆ. ಪ್ರಸ್ತರ ಭಾಗವು ಉತ್ತರ, ವಲಭಿ, ಕಪೋತ ಭಾಗಗಳನ್ನು ಒಳಗೊಂಡಿದೆ.

**ದೇಗುಲ–2**

ಈ ದೇಗುಲವು ಸಂಪೂರ್ಣವಾಗಿ ನಾಶವಾಗಿದು, ಆದರೆ ಅಲ್ಲಿನ ಅವಶೇಷಗಳನ್ನು ಗಮನಿಸಿದಾಗ ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿರುವಂತೆ ಕಂಡುಬರುತ್ತದೆ. ಏರುವಿನ್ಯಾಸದಲ್ಲಿ ಕೇವಲ ಅಧಿಷ್ಠಾನ ಭಾಗ ಮಾತ್ರ ಉಳಿದಿದ್ದು, ಇದರಲ್ಲಿ ಉಪಾನ, ಜಗತಿ, ಗಳ, ತ್ರಿಪಟ್ಟ ಕುಮುದ ಭಾಗಗಳು ಕಂಡುಬರುತ್ತವೆ. ಪ್ರಸ್ತುತ ಈ ಭಾಗಗಳ ಆಧಾರದ ಮೇಲೆ ಈ ಅಧಿಷ್ಠಾನವನ್ನು ಪಾದಬಂಧ ಅಧಿಷ್ಠಾನ ಎಂದು ಗುರುತಿಸಬಹುದು. ಪಾದಬಂಧ ಅಧಿಷ್ಠಾನವು ಆಕಾರದಲ್ಲಿ ಬಹಳ ಸರಳವಾಗಿಯೂ ನೋಡುವುದಕ್ಕೆ ಅಚ್ಚು ಕಟ್ಟಾಗಿಯೂ ಇರುತ್ತದೆ. ಇದರ ಅಂಗಗಳೆಂದರೆ ಉಪಾನ, ಜಗತಿ, ತ್ರಿಪಟ್ಟ ಕುಮುದ, ಗಳ, ಮಹಾ ಪಟ್ಟಿಕೆಯನ್ನು ಹೊಂದಿರುತ್ತದೆ.

**ದೇಗುಲ–3**

ಈ ದೇಗುಲದ ತಳವಿನ್ಯಾಸವನ್ನು ಗಮನಿಸಿದಾಗ ಗರ್ಭಗೃಹ, ಅಂತರಾಳ, ನವರಂಗ ಮತ್ತು ನಂದಿಗಾಗಿ ಪ್ರತ್ಯೇಕ ನಂದಿ ಮಂಟಪವನ್ನು ನಿರ್ಮಿಸಿದಂತೆ ತಿಳಿದುಬರುತ್ತದೆ. ಪ್ರಸ್ತುತ ಗರ್ಭಗೃಹ ಅಂತರಾಳದ ಭಾಗಗಳು ಎಲ್ಲಾ ನಾಶಗೊಂಡು ಕೇವಲ ತೆರೆದ ನವರಂಗ ಮತ್ತು ನಂದಿ ಮಂಟಪ ಕನಿಷ್ಠ ಪ್ರಮಾಣದಲ್ಲಿ ಉಳಿದುಕೊಂಡಿವೆ. ಇನ್ನುಳಿದ ಭಾಗಗಳು ನಾಶಗೊಂಡಿರುವುದರಿಂದ ಅದಿಷ್ಠಾನ, ಭಿತ್ತಿ, ಪ್ರಸ್ತರ ಭಾಗಗಳನ್ನು ತಿಳಿಯಲು ಕಷ್ಟಕರವಾಗಿದೆ.

ನವರಂಗವು ಯಾವುದೇ ಗೋಡೆ ಇಲ್ಲದೆ ತೆರೆದ ರೀತಿಯಲ್ಲಿ ನಿರ್ಮಿಸಲಾಗಿದೆ. ಸುತ್ತಲಿನ ಕಂಬಗಳು ಯಾವುದೇ ಅಲಂಕರಣೆವಿಲ್ಲದೆ ಸಾಮಾನ್ಯ ರಚನೆಯಿಂದ ಕೂಡಿದ್ದು ಸುತ್ತಲೂ ಹನ್ನೆರಡು ಕಂಬಗಳನ್ನು ನಿರ್ಮಿಸಲಾಗಿದೆ. ಆದರೆ ಮಧ್ಯದಲ್ಲಿ ಇರುವ ನಾಲ್ಕು ಕಂಬಗಳು ವೃತ್ತಕಾರವಾಗಿದು, ಇವುಗಳು ಎತ್ತರದ ವೇದಿಕೆಯ ಮೇಲೆ ನಿರ್ಮಾಣವಾಗಿವೆ. ಈ ಕಂಬಗಳು ಪೀಠ, ಪಾದ, ದಂಡ, ಕುಂಭ ಮತ್ತು ಬೋಧಿಗೆಯನ್ನು ಹೊಂದಿದು,

ಕಂಬಗಳ ಮೇಲೆ ಹೂವಿನ ಅಲಂಕರಣೆ, ಕೀರ್ತಿಮುಖಗಳ ರಚನೆ, ನೃತ್ಯ ಮಾಡುವ ಶಿಲ್ಪಗಳು ಕಂಡುಬರುತ್ತವೆ. ಈ ಒಳಭಾಗದ ನಾಲ್ಕು ಕಂಬಗಳು ಒಂದೇ ರೀತಿಯಾದ ಲಕ್ಷಣವನ್ನು ಹೊಂದಿವೆ. ಪ್ರಸ್ತುತ ನವರಂಗದ ಮಧ್ಯದಲ್ಲಿ ಎತ್ತರ ವೇದಿಕೆಯನ್ನು ಅಗೆದು ಅದರ ಮಧ್ಯದಲ್ಲಿ ಲಿಂಗವನ್ನು ಇಟ್ಟಿರುವುದನ್ನು ಗಮನಿಸಬಹುದು. ಈ ಶಿವಲಿಂಗವು ಸುಮಾರು 3–4 ಅಡಿ ಎತ್ತರವಾಗಿದೆ. ಇನ್ನೂ ನವಂರಗಕ್ಕೆ ಪೂರ್ವ ಮತ್ತು ದಕ್ಷಿಣ ದಿಕ್ಕಿಗೆ ಪ್ರವೇಶ ದ್ವಾರವನ್ನು ನಿರ್ಮಿಸಿದಂತೆ ಕಾಣುತ್ತದೆ.

ನವರಂಗದ ಮುಂದಿನ ಭಾಗದಲ್ಲಿ ಒಂದು ಮಂಟಪವಿದ್ದು ಇದು ಪಶ್ಚಿಮಾಭಿಮುಖವಾಗಿದೆ. ಈ ಮಂಟಪವನ್ನು ಗಮನಿಸಿದಾಗ ಇದು ನಂದಿ ಮಂಟಪದಂತೆ ತಿಳಿದು ಬರುತ್ತದೆ. ನಂದಿಮಂಟಪವು ಅಧಿಷ್ಠಾನ, ಭಿತ್ತಿ ಮತ್ತು ಪ್ರಸ್ತರವನ್ನು ಹೊಂದಿದ್ದು, ಅದಿಷ್ಠಾನ ಭಾಗವು ಮಣ್ಣಿನಲ್ಲಿ ಮುಚ್ಚಿರುವುದರಿಂದ ಅದರ ಉಪಂಗಗಳ ಮಾಹಿತಿಯು ಗೋಚರವಾಗುವುದಿಲ್ಲ. ಮಂಟಪ ಹಿಂದಿನ ಭಾಗದಲ್ಲಿ ತೆರೆದ ಜಾಲಂಧ್ರವನ್ನು ನಿರ್ಮಿಸಲಾಗಿದೆ. ಇನ್ನು ಪ್ರಸ್ತರದಲ್ಲಿ ಕಪೋತ ಭಾಗವಿದ್ದು ಕಪೋತದಲ್ಲಿ ನಿರಾಲಂಕೃತವಾದ ನಾಶಿಗಳ ರಚನೆಯನ್ನು ಕಾಣಬಹುದು. ಈ ಮಟಂಪದ ಬಾಗಿಲವಾವು ಸರಳ ರಚನೆಯಿಂದ ಕೂಡಿದೆ.

**ದೇಗುಲ–4**

ಈ ದೇಗುಲವು ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿದೆ. ಪ್ರಸ್ತುತ ಗರ್ಭಗುಡಿ ಮಾತ್ರ ಉಳಿದುಕೊಂಡಿದ್ದು, ಇನ್ನುಳಿದ ಭಾಗಗಳು ಸ್ಥಿತಿಲಾವಸ್ಥೆಯಿಂದ ಕೂಡಿವೆ. ಗರ್ಭಗೃಹದಲ್ಲಿ ಯಾವುದೇ ಮೂರ್ತಿಶಿಲ್ಪವಿಲ್ಲ. ಅಂತರಾಳದ ಭಿತ್ತಿವು ಸ್ವಲ್ಪ ಭಾಗ ಮಾತ್ರ ಉಳಿದುಕೊಂಡಿದ್ದು ನವರಂಗದ ಯಾವುದೇ ಅವಶೇಷಗಳು ಕಾಣದೆ ಇದ್ದರು ತಳಪಾಯ ಮಾತ್ರ ಉಳಿದುಕೊಂಡಿದೆ. ಇದರ ಮೂಲಕ ಈ ದೇಗುಲವು ನವರಂಗವನ್ನು ಸಹ ಹೊಂದಿತ್ತೆಂದು ಊಹಿಸಬಹುದು.

ಏರುವಿನ್ಯಾಸದ ಲಕ್ಷಣಗಳನ್ನು ಗಮನಿಸಿದಾಗ ಅಧಿಷ್ಠಾನ, ಭಿತ್ತಿ, ಪ್ರಸ್ತರ ಭಾಗಗಳನ್ನು ಹೊಂದಿರುವುದು ತಿಳಿಯುತ್ತದೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಗಳ, ವೃತ್ತ ಕುಮುದ, ಕಂಪ, ಗಳ, ಕಂಪ, ಪಟ್ಟಿಕೆಯನ್ನು ಹೊಂದಿದೆ. ಈ ಅಧಿಷ್ಠಾನವನ್ನು ಪಾದಬಂಧ ಅಧಿಷ್ಠಾನ ಎಂದು ಕರೆಯಬಹುದು. ಅಧಿಷ್ಠಾನದ ವಿಧಗಳಲ್ಲಿ ಪಾದಬಂಧ ಅಧಿಷ್ಠಾನವು ಒಂದು ಇದರ ಅಂಗಗಳೆಂದರೆ ಉಪಾನ, ಜಗತಿ, ತ್ರಿಪಟ್ಟ ಕುಮುದ, ಗಳ ಮತ್ತು ಮಹಾಪಟ್ಟಿಕೆಗಳನ್ನು ಹೊಂದಿರಬೇಕು ಎಂದು ಶಾಸ್ತ್ರ ಗ್ರಂಥಗಳು ತಿಳಿಸುತ್ತವೆ. ಈ ಅಧಿಷ್ಠಾನದ ಕೆಳ ಅಂಗಗಳು ದೇಹದಿಂದ ಹೇಗೆ ಪಾದಗಳು ಮುಂಚಾಚಿರುತ್ತವೆಯೋ ಹಾಗೇ ದೇವಾಲಯದ ಏರುವಿನ್ಯಾಸದಿಂದ ಮುಂಚಾಚಿದಂತಿರುವುದರಿಂದ ಇದಕ್ಕೆ ಪಾದಬಂಧ ಅಧಿಷ್ಠಾನವೆಂದು ಹೆಸರು. ಭಿತ್ತಿ ಭಾಗದಲ್ಲಿ ಯಾವುದೇ ಅಲಂಕರಣೆಗಳು ಕಂಡುಬರುವುದಿಲ್ಲ. ಆದರೆ ಈ ಭಾಗದಲ್ಲಿ ಅರ್ಧಗಂಬಗಳ ರಚನೆಯು ಕಂಡುಬರುತ್ತವೆ. ಭಿತ್ತಿಯ ಮಧ್ಯಭಾಗದಲ್ಲಿ ಹೊರಚಾಚಿದಂತೆ ನಿರ್ಮಿಸಲಾಗಿದ್ದು ಅವುಗಳ ಮಧ್ಯದಲ್ಲಿ ಕೋಷ್ಠಗಳ ರಚನೆಯನ್ನು ಮಾಡಿದ್ದಾರೆ. ಪ್ರಸ್ತರ ಭಾಗದಲ್ಲಿ ಕಪೋತ ನಿರ್ಮಾಣವಾಗಿದ್ದು ಕಪೋತದಲ್ಲಿ ನಾಸಿಗಳ ರಚನೆ ಮಾಡಲಾಗಿದೆ. ಈ ನಾಸಿಗಳ ಸುತ್ತಲೂ ಹೂವಿನ ಅಲಂಕರಣೆಗಳು, ಮಧ್ಯದಲ್ಲಿ ಮನುಷ್ಯ, ಆನೆ, ಸಿಂಹ, ಕೆತ್ತನೆಗಳಿದ್ದು ಇದರ ಮೇಲ್ಭಾಗದಲ್ಲಿ ಕೀರ್ತಿಮುಖಗಳನ್ನು ರಚಿಸಲಾಗಿದೆ.

ದಿನ್ನೆಯ ಮೇಲೆ ಇರುವಂತಹ ಈ ದೇಗುಲಗಳು ಕೆಲವು ಮಾತ್ರ ಉಳಿದುಕೊಂಡಿದ್ದು ಉಳಿದ ದೇಗುಲಗಳು ನಾಶವಾಗಿವೆ. ಅಲ್ಲಿ ಕೆಲವು ಅಧಿಷ್ಠಾನ ಭಾಗಗಳು ನಶಿಸಿ ಹೋಗಿವೆ. ಆದರೆ ಇಲ್ಲಿ ಕೇವಲ ಏಳು ದೇಗುಲಗಳು ಅಷ್ಟೇ ಅಲ್ಲದೇ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ದೇಗುಲಗಳು ನಿರ್ಮಾಣವಾಗಿದ್ದವು ಎಂದು ಅಲ್ಲಿನ ಕುರುಹುಗಳಿಂದ ತಿಳಿದು ಬರುತ್ತದೆ. ಹಾಗೆಯೇ ಪ್ರಸ್ತುತದಲ್ಲಿ ಅಲ್ಲಿ ಮುಳ್ಳಿನ ಗಿಡಗಳು

ಬೆಳೆದಿರುವುದರಿಂದ ಉಳಿದ ದೇಗುಲಗಳ ಕುರುಹುಗಳು ಸಹ ಮರೆಮಾಚಿರುವಂಹ ಸಂಗತಿಗಳು ಕಾಣಬಹುದು. ಸಿ.ಎಸ್. ಪಾಟೀಲ್ ಮತ್ತು ಬಾಲಸುಬ್ರಮಣ್ಯ ಅವರ Sirival (It's Monuments, Sculptures and Inscriptions) ಎಂಬ ಪುಸ್ತಕದಲ್ಲಿ ಇಲ್ಲಿ 12 ದೇಗುಲಗಳ ಸಮೂಹಗಳಿದ್ದವು ಎಂದು ತಿಳಿಸಿದ್ದಾರೆ. ನಾನು ಕ್ಷೇತ್ರಕಾರ್ಯ ಮಾಡಿದಂತಹ ಸಂದರ್ಭದಲ್ಲಿ ನನಗೆ 7 ದೇಗುಲ ಕುರುಹುಗಳು ಮಾತ್ರ ಕಂಡುಬಂದಿದ್ದು, ಉಳಿದ ದೇಗುಲಗಳು ಪ್ರಾಕೃತಿಕ ವಿಕೋಪ ಅಥವಾ ಅಲ್ಲಿನ ಜನರ ವ್ಯವಸಾಯ, ಉಳುಮೆಯಿಂದ ನಾಶವಾಗಿರುವಂತೆ ಕಂಡುಬರುತ್ತದೆ.

**ದೇಗುಲ–5**

ಶಿರಿವಾಳ ಗ್ರಾಮದಿಂದ ಅಣಬಿ ರಸ್ತೆಯ ಬಲಭಾಗದಲ್ಲಿ ಕಂಡುಬರುತ್ತವೆ. ಇಲ್ಲಿ ಮೂರು ದೇಗುಲಗಳಿದ್ದು, ಇದರಲ್ಲಿ ಒಂದು ದೇಗುಲವು ಮಠದ ರೀತಿಯಲ್ಲಿ ಕಂಡುಬರುತ್ತದೆ. ರಸ್ತೆಯಿಂದ ಮೊದಲನೇ ದೇಗುಲವು ಗರ್ಭಗೃಹವನ್ನು ಮಾತ್ರ ಹೊಂದಿದ್ದು, ಗರ್ಭಗೃಹದಲ್ಲಿ ಯಾವುದೇ ರೀತಿಯ ಮೂರ್ತಿಶಿಲ್ಪ ಹಾಗೂ ಬಾಗಿಲವಾಡಗಳು ಕಂಡುಬರುವುದಿಲ್ಲ. ದೇಗುಲದ ತಳಪಾಯವನ್ನು ಗಮನಿಸಿದಾಗ ತ್ರಿಕೂಟ ದೇಗುಲವೆಂದು ತಿಳಿದುಬರುತ್ತದೆ. ಉತ್ತರಕ್ಕೆ ಮುಖ ಮಾಡಿರುವ ಈ ದೇಗುಲವು ಬಲಭಾಗ ಮತ್ತು ಮುಂದಿನ ಭಾಗಗಳು ನಾಶಗೊಂಡಿದೆ. ಎಡಭಾಗ ಮತ್ತು ಹಿಂದಿನ ಭಾಗಗಳು ಸ್ವಲ್ಪ ಪ್ರಮಾಣದಲ್ಲಿ ಉಳಿದುಕೊಂಡಿದ್ದು ಇವು ಅಧಿಷ್ಠಾನ, ಭಿತ್ತಿ, ಪ್ರಸ್ತರ ಭಾಗಗಳನ್ನು ಹೊಂದಿದೆ.

ಅಧಿಷ್ಠಾನ ಭಾಗದಲ್ಲಿ ಉಪಾನ, ಜಗತಿ, ಪದ್ಮ, ಕಂಪ, ಗಳ, ಕಂಪ, ಧಾರವೃತ್ತ ಕುಮುದ, ಕಂಪ, ಗಳ, ಕಂಪ, ಕಪೋತ ಭಾಗಗಳನ್ನು ಹೊಂದಿದೆ. ಈ ಅಧಿಷ್ಠಾನ ಭಾಗವನ್ನು ಸ್ವಲ್ಪ ವ್ಯತ್ಯಾಸಗಳೊಂದಿಗೆ ಪದ್ಮಬಂಧ ಅಧಿಷ್ಠಾನ ಎಂದು ಕರೆಯಬಹುದು. ಈ ಪ್ರಕಾರದ ಅಧಿಷ್ಠಾನದಲ್ಲಿ ಉಪಾನ, ಪದ್ಮ, ಕಂಪ, ಜಗತಿ, ತ್ರಿಪಟ್ಟ ಕುಮುದ, ಕಂಪ, ಗಳ, ಕಂಪ ಅಂಗಗಳು ಇರುತ್ತದೆ. ಕೆಲವು ಗ್ರಂಥಗಳ ಪ್ರಕಾರ ತ್ರಿಪ್ಪಟ ಕುಮುದ ಬದಲು ವೃತ್ತ ಕುಮುದವು ಇರುವುದಂಟು. ಭಿತ್ತಿ ಭಾಗದಲ್ಲಿ ಯವುದೇ ಅಲಂಕರಣೆವಿಲ್ಲದೆ ಅರ್ಧಗಂಬಗಳ ಕೆತ್ತನೆಯ ಮೂಲಕ ನಿರ್ಮಿಸಲಾಗಿದೆ. ಇಲ್ಲಿಯೂ ಸಹ ಮಧ್ಯದ ಭಾಗ ಹೊರಚಾಚಿದಂತೆ ಭಿತ್ತಿಯನ್ನು ನಿರ್ಮಿಸಲಾಗಿದೆ. ಪ್ರಸ್ತರ ಭಾಗದಲ್ಲಿ ಕಪೋತವನ್ನು ಹೊಂದಿದ್ದು ಕಪೋತದಲ್ಲಿ ನಿರಲಂಕೃತವಾದ ನಾಸಿಗಳ ರಚನೆ ಮಾಡಲಾಗಿದೆ.

**ದೇಗುಲ–ಮಠ**

ಈ ದೇಗುಲವು ಉತ್ತರಭಿಮುಖವಾಗಿದ್ದು, ಎರಡು ಕೋಣೆಗಳನ್ನು ಆಯತಾಕಾರದಲ್ಲಿ ರಚಿಸಲಾಗಿದೆ. ಮಧ್ಯದಲ್ಲಿ ತ್ರಿಪಟ್ಟಿಕೆಯನ್ನು ಹೊಂದಿರುವ ದ್ವಾರವನ್ನು ನಿರ್ಮಿಸಿ, ಕುಬ್ಜ ಗೋಡೆಯ ಮೂಲಕ ಎರಡು ಭಾಗಗಳನಾಗಿ ಮಾಡಲಾಗಿದೆ. ಈ ದ್ವಾರದಲ್ಲಿ ಯಾವುದೇ ಅಲಂಕರಣೆ ಮತ್ತು ಶಿಲ್ಪಗಳ ರಚನೆಗಳಿರುವುದಿಲ್ಲ. ಆದರೆ ಇದರ ಮುಂದಿನ ಕೋಣೆಯ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕಾಣಬಹುದು. ಅಧಿಷ್ಠಾನ ಭಾಗದಲ್ಲಿ ಉಪಾನ, ಜಗತಿ, ಖುರಕುಂಭ ಉಪಅಂಗಗಳಿಂದ ಕೂಡಿದ್ದು, ಭಿತ್ತಿ ಭಾಗದಲ್ಲಿ ಯಾವುದೇ ಅಲಂಕರಣೆವಿಲ್ಲದೆ ಸರಳ ರಚನೆಯಿಂದ ಕೂಡಿದೆ. ಪ್ರಸ್ತರ ಭಾಗದಲ್ಲಿ ಕಪೋತವನ್ನು ನಿರ್ಮಿಸಿದ್ದು ಇದರಲ್ಲಿ ನಾಸಿ ಕೋಷ್ಠಗಳ ರಚನೆಯನ್ನು ಮಾಡಲಾಗಿದೆ. ಈ ದೇಗುಲವನ್ನು ಗಮನಿಸಿದಾಗ ಇದು ದೇಗುಲವಾಗದೆ ಮಠ ಅಥವಾ ಭಕ್ತರಿಗೆ ಇರಲು ವಿಶ್ರಾಂತಿ ಮಂಟಪ ಎಂದು ಊಹಿಸಬಹುದು.

**ದೇಗುಲ–6**

ಈ ದೇಗುಲವು ಹಿಂದೆ ಹೇಳಿದ ದೇಗುಲಗಳ ಪೂರ್ವಕ್ಕೆ ಸ್ವಲ್ಪ ದೂರದ ಹೊಲದಲ್ಲಿ ಕಂಡುಬರುತ್ತದೆ. ಈ ದೇಗುಲವು ಸಂಪೂರ್ಣವಾಗಿ ನಾಶವಾಗಿದ್ದು, ಇದರ ರಚನವಿನ್ಯಾಸವನ್ನು

ಗುರುತಿಸಲು ಕಷ್ಟವಾಗಿದೆ. ಇದರ ಅಧಿಷ್ಠಾನ ಭಾಗವು ಉಪಾನ, ಜಗತಿ, ಪದ್ಮ, ಕಂಪ, ಗಳ, ಕಂಪ, ತ್ರಿಪಟ್ಟ ಕುಮುದ ಈ ಕುಮುದ ಮಧ್ಯಪಟ್ಟಿಕೆಯಲ್ಲಿ ಹೂ–ಬಳ್ಳಿ ಚಿತ್ರಗಳ ಅಲಂಕರಣೆಯನ್ನು ಮಾಡಲಾಗಿದೆ. ಕಂಪ, ಗಳ, ಕಂಪ, ಕಪೋತವನ್ನು ಹೊಂದಿದೆ. ಈ ಭಾಗಗಳ ಲಕ್ಷಣದಿಂದ ಈ ಅಧಿಷ್ಠಾನವನ್ನು ಪದ್ಮ ಪುಷ್ಕಳ ಅದಿಷ್ಠಾನ ಎಂದು ಗುರುತಿಸಬಹುದು. ಈ ಅಧಿಷ್ಠಾನದ ಅಂಗಗಳು ಉಪಾನ, ಮಹಾಪದ್ಮ, ಜಗತಿ, ಕುಮುದ, ಗಳ, ಮತ್ತು ಪ್ರತಿ. ಈ ಅದಿಷ್ಠಾನಕ್ಕೆ ಹೆಸರು ಬರಲು ಕಾರಣ ಇದರಲ್ಲಿರುವ 'ಮಹಾಪದ್ಮದ' ಅಲಂಕರಣೆ. ಇನ್ನೂ ಕಪೋತ ಭಾಗದಲ್ಲಿ ನಾಸಿಗಳ ಅಲಂಕರಣೆಯನ್ನು ಸಹ ಇಲ್ಲಿ ಗುರುತಿಸಬಹುದು. ಇನ್ನೂ ದೇಗುಲಗಳ ಅವಶೇಷಗಳು ಅಲ್ಲಿಯೇ ಬಿದ್ದಿದ್ದು ಅವುಗಳಲ್ಲಿ ಸರಳ ರಚನೆಯಿಂದ ಕೂಡಿದ ಕಂಬಗಳು ಮತ್ತು ಬಾಗಿಲವಾಡಗಳನ್ನು ಗಮನಿಸಿದಾಗ ಈ ದೇಗುಲವು ಸಹ ಗರ್ಭಗೃಹ, ಅಂತರಾಳ, ನವರಂಗವನ್ನು ಹೊಂದಿರುವಂತೆ ಕಾಣುತ್ತದೆ.

**ದೇಗುಲ–7**

ಗ್ರಾಮದ ಮಧ್ಯದಲ್ಲಿ ಇರುವ ಈ ದೇಗುಲವು ಪೂರ್ವಾಭಿಮುಖವಾಗಿದ್ದು ಗರ್ಭಗೃಹ, ಅಂತರಾಳ ನವರಂಗವನ್ನು ಹೊಂದಿದೆ. ಗರ್ಭಗೃಹವು ಖಾಲಿಯಾಗಿದ್ದು ಅದರಲ್ಲಿ ಪ್ರಸ್ತುತ ಯಾವುದೇ ಮೂರ್ತಿಶಿಲ್ಪವು ಇರುವುದಿಲ್ಲ. ಈ ಗರ್ಭಗೃಹದ ಬಾಗಿಲವಾಡವು ಸರಳ ರಚನೆಯಿಂದ ಕೂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕಾಣಬಹುದು. ಗರ್ಭಗೃಹದ ಮುಂದೆ ತೆರೆದ ಅಂತರಾಳವಿದ್ದು ಇದರಲ್ಲಿ ಯಾವುದೇ ಅಲಂಕಾರಣ ಭಾಗಗಳು ಕಂಡು ಬರುವುದಿಲ್ಲ. ನವರಂಗದಲ್ಲಿ ನಾಲ್ಕು ಕಂಬಗಳಿಂದ ಕೂಡಿದ್ದು, ಮಧ್ಯದ ಅಂಕಣದಲ್ಲಿ ಪದ್ಮದಳ ಅಲಂಕರಣೆಯನ್ನು ಮಾಡಲಾಗಿದೆ. ಇನ್ನು ನವರಂಗದಲ್ಲಿ ಕಂಬಗಳು ಒಂದೇ ರೀತಿಯಾಗಿದ್ದು ಯಾವುದೇ ಉಬ್ಬುಶಿಲ್ಪಗಳ ಅಲಂಕರಣೆವಿಲ್ಲದೆ, ಈ ಕಂಬಗಳು ಪೀಠ, ಪಾದ, ದಂಡ/ಮಧ್ಯಪಟ್ಟ, ಚತುರಶ್ರ, ತಾಟಿಕ, ಕುಂಭ, ಮಂಡಿ, ಫಲಕ ಬೋಧಿಗೆಯನ್ನು ಹೊಂದಿವೆ. ಈ ಕಂಬಗಳನ್ನು ಮಿಶ್ರಕ ಸ್ತಂಭಗಳು ಎಂದು ಕರೆಯಬಹುದು.

ಈ ಬಗೆಯ ಸ್ತಂಭಗಳನ್ನು ಮಯಮತ ಗ್ರಂಥವು ಹೆಸರಿಸಿದ್ದು, ಸ್ತಂಭದಲ್ಲಿ ಎರಡು ಭಾಗಗಳಿದ್ದು, ಅದರಲ್ಲಿ ಕೆಳಭಾಗವು ಚೌಕಾಕಾರವಾಗಿದ್ದು ಅದರ ಮೇಲಿನ ಅಂಗಗಳು ಎಂಟು ಮುಖ, ಹದಿನಾರು ಮುಖ ಅಥವಾ ವೃತ್ತಾಕಾವಗಿದ್ದರೆ ಅದು 'ಪೂರ್ವಾಶ್ರ' ಅದರ ಕುಂಭ, ಮಂಡಿಗಳಿದ್ದು ಅವು ಪೂರ್ತಿ ವೃತ್ತಾಕಾರವಾಗಿದ್ದರೆ ಅದು ರುದ್ರಕಾಂತ ಎಂದು ಹೇಳಬಹುದು. ಇನ್ನೂ ಈ ಸ್ತಂಭಗಳು ಈ ಎರಡು ಲಕ್ಷಣವನ್ನು ಹೊಂದಿರುವುದರಿಂದ ಇವುಗಳನ್ನು ಮಿಶ್ರಕ ಸ್ತಂಭಗಳು ಎಂದು ಹೇಳಬಹುದು.

ನವರಂಗದಲ್ಲಿ ಇರುವ ಈ ಸ್ತಂಭಗಳ ಮಧ್ಯಪಟ್ಟ ಅಥವಾ ದಂಡದಲ್ಲಿ ಹದಿನಾರು ಪಟ್ಟಿಕೆಗಳಿಂದ ಕೂಡಿವೆ. ನವರಂಗಕ್ಕೆ ಪೂರ್ವ, ಹಾಗೂ ದಕ್ಷಿಣ ಭಾಗಕ್ಕೆ ದ್ವಾರಗಳನ್ನು ಮಾಡಲಾಗಿದ್ದು, ಪೂರ್ವ ದ್ವಾರ ಬಾಗಿಲವಾಡವು ಲತಾ ಪಟ್ಟಿಕೆ, ವ್ರಜ ಪಟ್ಟಿಕೆ, ಸ್ತಂಭ ಪಟ್ಟಿಕೆ ಅರ್ಧವೃತ್ತ ಪಟ್ಟಿಕೆ ಇದ್ದು ಪೇದ್ಯಾಭಾಗದಲ್ಲಿ ದ್ವಾರಪಾಲಕ ಶಿಲ್ಪಗಳಿವೆ. ಪ್ರಸ್ತುತ ಪೇದ್ಯಾಭಾಗದಲ್ಲಿನ ಶಿಲ್ಪಗಳು ನೆಲದಲ್ಲಿ ಮುಚ್ಚಿಹೋಗಿ ತಲೆಯಭಾಗ ಮಾತ್ರ ಕಾಣುತ್ತವೆ. ಇನ್ನು ಉತ್ತರಾಂಗದಲ್ಲಿ ಚಿತ್ರಗಳ ಅಲಂಕರಣೆ, ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವನ್ನು ಕಾಣಬಹುದು. ದಕ್ಷಿಣ ದ್ವಾರವು ಸಹ ಪೂರ್ವ ಬಾಗಿಲವಾಡದ ರಚನೆಯ ಲಕ್ಷಣಗಳನೇ ಹೊಂದಿದ್ದು ಉತ್ತರಾಂಗದಲ್ಲಿ ಮಾತ್ರ ಕೀರ್ತಿಮುಖಗಳ ರಚನೆಯನ್ನು ಮಾಡಲಾಗಿದೆ.

ಅಧಿಷ್ಠಾನ ಭಾಗವು ಉಪಾನ, ಜಗತಿ, ಕಂಪ, ಗಳ, ಕಂಪ, ತ್ರಿಪಟ್ಟ ಕುಮುದ, ಕಂಪ, ಗಳ ಕಂಪ, ಕಪೋತವನ್ನು ಹೊಂದಿದೆ. ಅದರಿಂದ ಇದನ್ನು ಕಪೋತಬಂಧ ಅಧಿಷ್ಠಾನ ಎಂದು ಕರೆಯಬಹುದು. ಕಪೋತಬಂಧ ಅಧಿಷ್ಠಾನವನ್ನು ಮಯಮತವು ಗ್ರಂಥ ಇದನ್ನು ಹೆಸರಿಸುತ್ತದೆ. ಇದು ಒಂದು

ರೀತಿಯ ಪಾದಬಂಧದ ಪ್ರಭೇದವೆನ್ನಬಹುದು. ಇದರ ಅಂಗಗಳೆಂದರೆ ಉಪಾನ, ಜಗತಿ, ತ್ರಿಪಟ್ಟ ಕುಮುದ, ಗಳ ಮತ್ತು ಪ್ರತಿ. ಭಿತ್ತಿ ಭಾಗದಲ್ಲಿ ಯಾವುದೇ ಶಿಲ್ಪಗಳ ಅಲಂಕರಣವಿಲ್ಲದೆ ಅರ್ಧಕಂಬಗಳ ಕೆತ್ತನೆಯನ್ನು ಕಾಣಬಹುದು. ಈ ರಚನೆಯು ದೇವಾಲಯದ ಸುತ್ತಲೂ ಕೂಡಿದೆ. ಇನ್ನೂ ಪ್ರಸ್ತರ ಭಾಗದಲ್ಲಿ ಕಪೋತ ಕಂಡುಬಂದಿದ್ದು ಕಪೋತದಲ್ಲಿ ನಾಸಿಗಳ ರಚನೆ ಕಂಡುಬರುತ್ತವೆ.

ಶಿರಿವಾಳದ ದೇಗುಲಗಳನ್ನು ಗಮನಿಸಿದಾಗ ಈ ಗ್ರಾಮವು ಒಂದು ದೇವಾಲಯಗಳ ರಚನೆಯ ಪಾಠಶಾಲೆ ಎಂದರೆ ತಪ್ಪಾಗಲಾರದು. ಅಷ್ಟೇ ಅಲ್ಲದೇ ಈ ಗ್ರಾಮದಲ್ಲಿ ಇನ್ನು ಹಲವು ದೇಗುಲಗಳಿದ್ದು ಪ್ರಸ್ತುತ ಅವುಗಳ ಅವಶೇಷಗಳು ಮಾತ್ರ ಉಳಿದುಕೊಂದಿವೆ. ಉಳಿದ ಕೆಲವು ಸಂಪೂರ್ಣವಾಗಿ ನಾಶವಾಗಿವೆ. ಈ ಮೊದಲೇ ಶಾಸನದಲ್ಲಿ ಉಲ್ಲೇಖವಿರುವ ಎರೆಹೇಶ್ವರ, ಚಟ್ಟೇಶ್ವರ, ಅಲ್ಮೇಶ್ವರ, ಮಹಾದೇವ, ಸೋಮೇಶ್ವರ, ಶಾಂತೀಶ್ವರ ದೇವಾಲಯಗಳು ಈ ದೇಗುಲಗಳೇ ಆಗಿರುವ ಸಾಧ್ಯಗಳಿವೆ. ಆದರೆ ಅವುಗಳಿಗೆ ಸರಿಯಾದ ಪುರಾವೆಗಳು ದೊರಕದ ಕಾರಣ ಈ ದೇಗುಲಗಳನ್ನು ನಿಕರವಾದ ಹೆಸರುಗಳಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ. ಇನ್ನು ಕೆಲವು ದೇಗುಲಗಳನ್ನು ಮನೆಗಳಾಗಿ, ದನಗಳ ಮೇವು ಸಂಗ್ರಹಣೆಗಾಗಿ, ಕೃಷಿ ಸಲಕರಣೆ ಉತ್ಪನಗಳ ಶೇಖರಣೆಗೆ ಮತ್ತು ಪ್ರಾಣಿಗಳ ವಾಸಸ್ಥಾನವಾಗಿರುವುದು ದುರಂತವೇ ಸರಿ ಎಂದು ಹೇಳಬಹುದು.

**ಪರಾಮರ್ಶನ/ಆಕರ ಗ್ರಂಥಗಳು**


- ಅಪರ್ಣ ಕೂ ಸ. (2021). *ದೇವಾಲಯ ವಾಸ್ತುಶಿಲ್ಪ ಪರಿಚಯ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಹನುಮಾಕ್ಷಿ ಗೋಗಿ. (2002). *ಕಲಬುರ್ಗಿ ಜಿಲ್ಲೆಯ ಶಾಸನಗಳು.* ಶಿವಚಂದ್ರ ಪ್ರಕಾಶನ.
- ಮನೋಜ್ ಜಿ. (2013). *ದೇವಾಲಯ ವಾಸ್ತು ವಿಜ್ಞಾನ.* ಸಂಭೋದಿನಿ ಪಬ್ಲಿಷರ್ಸ್ ಮತ್ತು ನಾಲೆಡ್ಜ ಅಕಾಡೆಮಿ.
- ಪಾಟೀಲ. ಎಂ. ಬಿ. (1997). *ಗುಲಬರ್ಗಾ ಜಿಲ್ಲೆಯ ಗ್ಯಾಜೆಟಿಯರ್.* ಗೀತಾಂಜಲಿ ಪ್ರಕಾಶನ.
- ಪ್ರಭಾಕರ್. ಎಂ. ಎನ್. (2011). *ದೇವಾಲಯ ವಾಸ್ತು.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ರಮೇಶ ನಾಯಕ. (2023). *ಕರ್ನಾಟಕ ದೇವಾಲಯ ಕೋಶ ಯಾದಗಿರಿ ಜಿಲ್ಲೆ.* ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ.